# 27 -12-2008 ಶ್ರೀ ಜಿತಾಮಿತ್ರ ತೀರ್ಥರು

**ಸಪ್ತರಾತ್ರಂ ಕೃಷ್ಣವೇಣ್ಯಾಮುಷಿತ್ವಾ ಪುನರುತ್ಥಿತಂ ।**

**ಜಿತಾಮಿತ್ರಂ ಗುರುಂ ವಂದೇ ವಿಭುಧೇಂದ್ರ ಕರೋದ್ಭವಂ ॥**

**ಆರಾಧನೆ ದಿನ – ಮಾರ್ಗಶಿರ ಅಮಾವಾಸ್ಯೆ**

"' ಇವರು ರುದ್ರಾಂಶ ಸಂಭೂತರು

ಆಶ್ರಮ ನೀಡಿದ ಗುರುಗಳು– ಶ್ರೀ ವಿಭುದೇಂಧ್ರ ತೀರ್ಥರು

ಇವರ ಶಿಷ್ಯರು – ಶ್ರೀ ರಘುನಂದನ ತೀರ್ಥರು,

ರಾಯರ ಮಠದ ೧೧ನೇ ಯತಿಗಳು

ಕಾಲ – **1490 – 1493** ಶಿವಪುರ, ಗುಲ್ಬರ್ಗ

ಪೂರ್ವಾಶ್ರಮ ನಾಮ – ಅನಂತಪ್ಪ , ವಿಭುದೇಂದ್ರತೀರ್ಥರಿಂದ ಸಂರಕ್ಷಣೆ

ಅದೃಶ್ಯ – **ಸಶರೀರರಾಗಿ ಕೃಷ್ಣಾನದಿಯ ನಡುಗಡ್ಡೆಯಲ್ಲಿ ಜ್ಞಾನವೃಕ್ಷದಲ್ಲಿ ಅದೃಶ್ಯರಾಗಿದ್ದಾರೆ. ಶ್ರೀಮದಾಚಾರ್ಯರ ತರುವಾಯ ಅದೃಶ್ಯರಾದ ಯತಿಗಳಲ್ಲಿ 3ನೇ ಯವರು. (ಮೊದಲನೆಯವರು ಶ್ರೀಮದಾಚಾರ್ಯರ ಪೂರ್ವಶ್ರಮದ ಸಹೋದರರಾದ ಶ್ರೀ ವಿಷ್ಣುತೀರ್ಥರು, ಎರಡನೆಯವರು ಶ್ರೀ ಬ್ರಹ್ಮಣ್ಯತೀರ್ಥರ ಗುರುಗಳಾದ ಶ್ರೀಪುರುಷೋತ್ತಮ ತೀರ್ಥರು.)**

**ಪವಾಡಗಳು** -

೧. ವಿಭುದೇಂದ್ರತೀರ್ಥರು ಅನಂತಪ್ಪನಿಗೆ ಒಂದು ನರಸಿಂಹ ಸಾಲಿಗ್ರಾಮವನ್ನು ಕೊಟ್ಟು, ಇದನ್ನು ಪ್ರತಿದಿನ ಪೂಜಿಸಿ, ಅಭಿಷೇಕಿಸಿ, ನೈವೇದ್ಯ ಮಾಡಿ, ನಂತರ ನಿನ್ನ ಕೆಲಸವನ್ನು ಮಾಡಿಕೊ ಎಂದು ಹೇಳಿದರು. ಅನಂತಪ್ಪನು ಪ್ರತಿದಿನ ಅದೇ ರೀತಿ ನಡೆಸಿಕೊಂಡು ಬರಲು ತೀರ್ಮಾನಿಸಿದನು. ಒಂದು ದಿನ ಅನಂತಪ್ಪನು ಪೂಜೆ ಮುಗಿಸಿ ನರಸಿಂಹ ದೇವರಿಗೆ ನೈವೇದ್ಯ ಸಮರ್ಪಿಸಲು ಹೋದಾಗ, ಎಷ್ಟೇ ಪ್ರಯತ್ನಿಸಿದರೂ ಅದು ಬಾಯಿ ತೆರೆಯಲಿಲ್ಲ. ಆಗ ಬೇಜಾರಾಗಿ ಆ ಸಾಲಿಗ್ರಾಮದಿಂದಲೇ ತನ್ನ ತಲೆಗೆ ಹೊಡೆದುಕೊಳ್ಳಲು ಉದ್ಯುಕ್ತನಾದನು. ಆಗ ಕರುಣಾಪೂರ್ಣಾ ಶ್ರೀಹರಿಯು ಬಾಯಿ ತೆಗೆದು ನೈವೇದ್ಯ ಸ್ವೀಕರಿಸಿದನು. ಏಕೆಂದರೆ ಇವರು ರುದ್ರಾಂಶರು. ಮನೋ ನಿಯಾಮಕ ರುದ್ರದೇವರ ಉಪಾಸನ ಮೂರ್ತಿ ನರಸಿಂಹದೇವರಲ್ಲವೆ.

೨. ಕೃಷ್ಣಾ ನದಿ ತೀರದಲ್ಲಿ ಶಿಷ್ಯರಿಗೆ ಪಾಠ ಹೇಳಿಕೊಡುವ ಸಂದರ್ಭ ನದಿಯ ಪ್ರವಾಹ ಬಂದಾಗ ದಡದ ಬದಿಯಲ್ಲಿದ್ದ ಮರದಲ್ಲಿ ಕುಳಿತು ಏಳು ದಿವಸ ನೆಲಿಸಿದ್ದು. ಪ್ರವಾಹ ನಿಂತಾಗ ಮತ್ತೆ ಅವರು ನದಿ ದಡದ ಅದೇ ಮರದಲ್ಲಿ ಪ್ರತ್ಯಕ್ಷವಾಗಿದ್ದು.

೩. ತಮ್ಮ ಕಡೇಗಳಿಗೆಗಾಗಿ ಇದೇ ಜಾಗವನ್ನು ಅವರು ಆಯ್ದುಕೊಂಡರು.

೪. ಇವರ ಬಾಲ್ಯ – ಪ್ರತಿನಿತ್ಯ ಸಂದ್ಯಾವಂದನೆ ಮಾಡಿದ ನಂತರ ಪ್ರಾಣಿಗಳನ್ನು ಮೇಯಿಸಿಕೊಂಡು ಹೊಲಕ್ಕೆ ಹೋಗಿ

ಮದ್ಯಾಹ್ನದವರೆಗೂ ಅಲ್ಲೇ ಇದ್ದು ಅನಂತರ ಮನೆಗೆ ಬಂದು ಸ್ನಾನ ಮಾಡಿ ನೈವೇದಿತ ಆಹಾರ ಸ್ವೀಕರಿಸಿ ಮತ್ತೆ ಹೊಲಕ್ಕೆ ಹೋಗಿ ಪ್ರಾಣಿಗಳನ್ನು ಮೇಯಿಸಿಕೊಂಡು ಸಂಜೆಯವರೆಗೂ ಅಲ್ಲೇ ಇದ್ದು ನಂತರ ಮನೆಗೆ ಬರುವ ಸಂಪ್ರದಾಯ.

೫. ಒಮ್ಮೆ ಸುಶೀಲೇಂದ್ರತೀರ್ಥರು ಜಿತಾಮಿತ್ರರ ದರ್ಶನಕ್ಕೆ ಬಂದಾಗ, ಜಿತಾಮಿತ್ರರ ಗಡ್ಡೆಯ ಎದುರಿಗೆ ತಮ್ಮ ಸಂಸ್ಥಾನದ ಮೂಲ ರಾಮನ ಪೂಜೆಗೆ ಸಿದ್ದಗೊಳಿಸಿದರು. ಅದೇ ಸಮಯದಲ್ಲಿ ಒಬ್ಬ ಜಂಗಮ ವಿಭೂತಿ, ರುದ್ರಾಕ್ಷಿ ಧರಿಸಿ ಅಲ್ಲೇ ಬರುತ್ತಿರುವುದನ್ನು ಕಂಡರು. ಅದೇ ಜಂಗಮ ಸಂಜೆ ಗರ್ಭಗುಡಿಗೆ ಪ್ರವೇಶಿಸಿ ಅಲ್ಲೆ ಅಂತರ್ಧಾನನಾದನು. ಎಷ್ಟೇ ಪ್ರಯತ್ನಿಸಿದರೂ ಸಿಕ್ಕಲಿಲ್ಲ. ಮತ್ತೆ ಅದೇ ಜಂಗಮ ರಾತ್ರಿ ಅದೇ ಗಡ್ಡೆಯ ಹತ್ತಿರ ಕಂಡರು ಮತ್ತೆ ಅದೃಶ್ಯರಾದರು.

೬. 1945ರಲ್ಲಿ ಶ್ರೀ ಸುಯಮೀಂದ್ರತೀರ್ಥರು ಅದೇ ಮರದ ಹತ್ತಿರ ಪೂಜೆಗೆ ಕುಳಿತಿದ್ದರು. ಜಿತಾಮಿತ್ರರ ಗಡ್ಡೆಯನ್ನು ಬಹಳ ಸುಂದರವಾಗಿ ಅಲಂಕರಿಸಿದ್ದರು. ಪೂಜೆ ನಂತರ ಜಿತಾಮಿತ್ರರಿಗೆ ಹಸ್ತೋದಕ ಮತ್ತು ಮಂಗಳಾರತಿ ಮಾಡಿದರು. ಪೂಜೆ ಮುಗಿದ ನಂತರ ಒಂದು ದೊಡ್ಡ ಹಾರ ಮರದಿಂದ ಇವರ ಕೊರಳಿಗೆ ಬಂದು ಬಿತ್ತು.